**ದಿನಾಂಕ: 07-07-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 2ನೇ ಪ್ರತಿವಾದಿ ಪರ ಶ್ರೀ ಬಿ.ಬಿ. ವಕೀಲರಿಂದ**

1. ನಿಮ್ಮ ತಾಯಿ ಈಗ ಎಲ್ಲಿ ಇದ್ದಾರೆ ಎಂದರೆ ನಮ್ಮೊಂದಿಗೆ ಇದ್ದಾರೆ ಎಂದು ಉತ್ತರಿಸುತ್ತಾರೆ. ದಾವಾದ ಜಮೀನು ಸ.ನಂ.423, 400, 383, 389ಇರುತ್ತದೆ. ಎಲ್ಲಾ ಜಮೀನುಗಳ ಅಕ್ಕಪಕ್ಕ ಯಾರು ಇದ್ದಾರೆಂದು ಗೊತ್ತಿಲ್ಲ. ಸದರಿ ಜಮೀನುಗಳು ನಮ್ಮ ತಂದೆ ಖರೀದಿ ಮಾಡಿರುತ್ತಾರೆ. ಮಹಾಂತಪ್ಪರವರಿಗೆ ಸ.ನಂ.423 ಭೀಮರಾಯರವರಿಂದ ಬಂದಿದೆ ಎಂದರೆ ಸರಿ. ಭೀಮರಾಯ ಮತ್ತು ತಿಪ್ಪಣ್ಣ ಅಣ್ಣತಮ್ಮಂದಿರು ಎಂದರೆ ಸರಿ. ಸ.ನಂ.423 ಭೀಮರಾಯನ ಪಾಲಿಗೆ ಬಂದಿತ್ತು ಎಂದರೆ ಸರಿ. ಭೀಮರಾಯ ಮಹಾಂತಪ್ಪನ ಹೆಸರಿಗೆ ಸ.ನ.423 ಮಾರಾಟ ಮಾಡಿದ್ದಾರೆ ಎಂದರೆ ಮಾರಾಟ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಸ.ನಂ.423 ನಿಮ್ಮ ತಂದೆ ತನ್ನ ಪಾಲಿಗೆ ಬರಬೇಕಾದ ಜಮೀನು ಮಹಾಂತಪ್ಪನ ಹೆಸರಿಗೆ ಮಾಡಿಕೊಟ್ಟಿರುತ್ತಾರೆ ಎಂದು ನಿಮ್ಮ ದಾವೆಯಲ್ಲಿ ಆಗಲೀ ಪ್ರಮಾಣ ಪತ್ರದಲ್ಲಾಗಲೀ ಬರೆಸಿಲ್ಲ ಎಂದರೆ ನಮ್ಮ ವಕೀಲ ಸಾಹೇಬರಿಗೆ ಹೇಳಿರುತ್ತೇನೆ ಎಂದು ಉತ್ತರಿಸುತ್ತಾರೆ. ಸ.ನಂ.423ರಲ್ಲಿ 11 ಎಕರೆ 18 ಗುಂಟೆ ಜಮೀನನ್ನು ಮಹಾಂತಪ್ಪ ಸಾಗುವಳಿ ಮಾಡುತ್ತಾನೆ ಎಂದರೆ ಸರಿ. ಸ.ನಂ.423 ಜಮೀನನ್ನು ಮಹಾಂತಪ್ಪನ ಹೆಸರಿಗೆ ಆದ ದಿನಾಂಕದಿಂದ ಇಲ್ಲಿವರೆಗೆ ಆತನೇ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಮೊದಲು ತನ್ನ ತಂದೆ ಇದ್ದರು ಈಗ ಬೇರೆ ಆಗಿದ್ದಾರೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಬೇರೆ ಆಗಿ 25 ವರ್ಷ ಆಗಿದೆ ಎಂದು ಉತ್ತರಿಸುತ್ತಾರೆ. ಮಹಾಂತಪ್ಪ, ಶಾಂತಪ್ಪ, ನಾಗಪ್ಪರವರು 25 ವರ್ಷಗಳ ಹಿಂದೆ ಬೇರೆ ಬೇರೆ ಆಗಿ ತಮ್ಮ ತಮ್ಮ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. 25 ವರ್ಷಗಳ ಹಿಂದೆ ಶಾಂತಪ್ಪನ ಪಾಲಿಗೆ 9 ಎಕರೆ ಜಮೀನು, ನಾಗಪ್ಪನ ಪಾಲಿಗೆ 16 ಎಕರೆ ಜಮೀನು, ಮಹಾಂತಪ್ಪನ ಪಾಲಿಗೆ 11 ಎಕರೆ ಮೇಲೆ ಗುಂಟೆ ಬಂದಿರುತ್ತದೆ. ಮಹಾಂತಪ್ಪನಿಗೆ ಸ.ನಂ.423 ರ ಜಮೀನು ಆತನ ಪಾಲಿಗೆ ಬಂದಿರುತ್ತದೆ. 25 ವರ್ಷಗಳ ಹಿಂದೆ ಭಾಗ ಮಾಡಿಕೊಂಡ ಪ್ರಕಾರ 2 ರಿಂದ 4ನೇ ಪ್ರತಿವಾದಿಯರ ಹೆಸರಿಗೆ ಪಹಣಿ ಇದೆ ಎಂದರೆ ಸರಿ. ಈ ಕೇಸನ್ನು ಹಾಕುವ ಮುಂಚೆ 2 ರಿಂದ 4ನೇ ಪ್ರತಿವಾದಿಯರಿಗೆ ಭಾಗ

ಬೇಕೆಂದು ಕೇಳಿಲ್ಲ ಎಂದರೆ ಕೇಳಿದ್ದೇನೆ ಎಂದು ಉತ್ತರಿಸುತ್ತಾರೆ. 25 ವರ್ಷಗಳ ಹಿಂದೆ ಭಾಗ ಆದ ಪ್ರಕಾರ 2 ರಿಂದ 4ನೇ ಪ್ರತಿವಾದಿಗಳ ಹೆಸರಿಗೆ ಆದಂತಹ ಪಹಣಿಗಳು ತಪ್ಪಿದೆ ಎಂದು ಎಲ್ಲಿಯೂ ಪ್ರಶ್ನೆ ಮಾಡಿಲ್ಲ.

2. ಈ ಕೇಸು ಹಾಕುವ ಮುಂಚೆ 1ನೇ ಪ್ರತಿವಾದಿಗೆ 2 ರಿಂದ 4ನೇ ಪ್ರತಿವಾದಿಯರು ವರ್ಷಕ್ಕೆ ಉಪಜಿವನಕ್ಕೆ ಖರ್ಚು ಕೊಡಬೇಕು ಎಂದು ನ್ಯಾಯ ಪಂಚಾಯತಿ ಆಗಿದೆ ಎಂದರೆ ಸರಿ. ಅದರ ಪ್ರಕಾರ 2 ನೆ ಪ್ರತಿವಾದಿ 1ನೇ ಪ್ರತಿವಾದಿಗೆ ಉಪಜೀವನಕ್ಕೆ ಏನು ಕೊಡಬೇಕು ಕೊಟ್ಟಿದ್ದಾರೆ ಎಂದರೆ ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ.

3. ನನ್ನ ತಂದೆ ತೀರಿಕೊಂಡು 20 ವರ್ಷಗಳಾಗಿರುತ್ತವೆ. 2 ರಿಂದ 4ನೇ ಪ್ರತಿವಾದಿಯರು ನಿಮ್ಮ ತಂದೆ ಜೀವಂತ ಇದ್ದಾಗಲೇ ಭಾಗ ಆಗಿದ್ದಾರೆ ಎಂದರೆ ಸರಿ. ನಿಮ್ಮ ತಂದೆ ತೀರಿಕೊಂಡ ನಂತರ 2 ರಿಂದ 4ನೇ ಪ್ರತಿವಾದಿಯರು ಮನೆಯ ಎಲ್ಲಾ ವ್ಯವಹಾರಗಳನ್ನು ಮಾಡುತ್ತಿದ್ದರು ಎಂದರೆ ನಮ್ಮ ತಾಯಿ ಸಹ ಮಾಡುತ್ತಿದ್ದರು ಎಂದು ಉತ್ತರಿಸುತ್ತಾರೆ. 5ನೇ ಪ್ರತಿವಾದಿಗೆ 1 ರಿಂದ 4ನೇ ಪ್ರತಿವಾದಿಯರು ಕೂಡಿ ಮಾರಾಟ ಮಾಡಿರುತ್ತಾರೆ. ಒಕ್ಕಲುತನ ಬಿಟ್ಟು 2 ರಿಂದ 4ನೇ ಪ್ರತಿವಾದಿಯರಿಗೆ ತಮ್ಮ ತಮ್ಮ ಜಮೀನಿನ ಆದಾಯ ಬಿಟ್ಟು ಬೇರೆ ಆದಾಯ ಇಲ್ಲ ಎಂದರೆ ಸರಿ. ಮನೆಯ ವ್ಯವಹಾರಕ್ಕಾಗಿ 1 ಮತ್ತು 2ನೇ ಪ್ರತಿವಾದಿಯರು 5ನೇ ಪ್ರತಿವಾದಿಗೆ ಸ.ನಂ.389 ಮಾರಾಟ ಮಾಡಿದ್ದಾರೆ ಎಂದರೆ ಸಾಲ ಯಾವುದೇ ಇದ್ದಿದ್ದಿಲ್ಲ ಎಂದು ಉತ್ತರಿಸುತ್ತಾರೆ. 2006-07ರಲ್ಲಿ 5ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಜಮೀನಿನಲ್ಲಿ ಅವರೇ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. 2006-07ರಲ್ಲಿ 5ನೇ ಪ್ರತಿವಾದಿ ಖರೀದಿ ಮಾಡಿದ ದಿನಾಂಕದಿಂದ ಇಲ್ಲಿವರೆಗೆ ಅವರು ಸಾಗುವಳಿ ಮಾಡುತ್ತಿರುವುದನ್ನು ಪ್ರಶ್ನಿಸಿಲ್ಲ ಎಂದರೆ ಸಾಗುವಳಿಗೆ ಅಷ್ಟೇ ಕೊಟ್ಟಿದ್ದೇವೆ ಎಂದು ಹೇಳಿರುತ್ತೇವೆ ಎಂದು ಉತ್ತರಿಸುತ್ತಾರೆ. 2006-07 ರಿಂದಲೂ 5ನೇ ಪ್ರತಿವಾದಿಯು ಸಾಗುವಳಿ ಮಾಡುತ್ತಿರುವ ವಿಚಾರ ಗೊತ್ತಿತ್ತು ಎಂದರೆ 20 ವರ್ಷಗಳಿಂದ ಗೊತ್ತಿತ್ತು ಆದರೆ ಮಾರಾಟ ಮಾಡಿರುವುದು ಈಗ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. 25 ವರ್ಷಗಳ

ಹಿಂದೆ 2 ರಿಂದ 4ನೇ ಪ್ರತಿವಾದಿಯರು ಭಾಗ ಮಾಡಿಕೊಂಡಿದ್ದರು ಈಗ ನಿಮಗೆ ಭಾಗ ಕೇಳಲು ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**3 ರಿಂದ 5ನೇ ಪ್ರತಿವಾಯರು ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ